# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ** | : | **551** |
| **ಮಾನ್ಯ ಸದಸ್ಯರ ಹೆಸರು** | : | **ಕೆ.ಎಸ್.ನವೀನ್,<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದರು)** |
| **ಉತ್ತರಿಸುವ ದಿನಾಂಕ** | : | **11.12.2025** |
| **ಉತ್ತರಿಸುವ ಸಚಿವರು.** | : | **ಗೃಹ ಸಚಿವರು.** |

| **ಕ್ರ.ಸಂ** | **ಪ್ರಶ್ನೆ** | **ಉತ್ತರ** |
|---|---|---|
| ಅ) | ರಾಜ್ಯದಲ್ಲಿ ಧರ್ಮಸ್ಥಳದ ಮೇಲೆ ಬಂದಿರುವ ಅಪರಾಧದ ಎಸ್ಐಟಿ ತನಿಖೆ ಯಾವ ಹಂತದಲ್ಲಿದೆ; (ವಿವರ ಒದಗಿಸುವುದು) | ಧರ್ಮಸ್ಥಳ ಭಾಗದಲ್ಲಿ ಅಸ್ವಾಭಾವಿಕವಾದ ಸಾವು/ಕೊಲೆ ಮತ್ತು ಅತ್ಯಾಚಾರ ಪ್ರಕರಣಗಳ ಸಮಗ್ರ ಮತ್ತು ನಿಷ್ಪಕ್ಷಪಾತ ತನಿಖೆಗಾಗಿ ವಿಶೇಷ ತನಿಖಾ ತಂಡ (ಎಸ್.ಐ.ಟಿ) ರಚಿಸುವಂತೆ ಕರ್ನಾಟಕ ರಾಜ್ಯ ಮಹಿಳಾ ಆಯೋಗವು ಕೋರಿದ ಮನವಿ ಮತ್ತು ಈ ಕುರಿತು ರಾಜ್ಯದ ಮಾಧ್ಯಮಗಳಲ್ಲಿ ಸುದ್ದಿಯು ಬಿತ್ತರವಾದ ಹಿನ್ನಲೆಯಲ್ಲಿ ಸರ್ಕಾರವು ಪ್ರಕರಣದ ಸತ್ಯಾಸತ್ಯತೆಯನ್ನು ಅರಿಯುವ ಸಲುವಾಗಿ ಡಾ॥ ಪ್ರಣವ್ ಮೊಹಂತಿ, ಐ.ಪಿ.ಎಸ್ ಇವರ ನೇತೃತ್ವದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 142 ಸಿಒಡಿ 2025 ದಿನಾಂಕ: 19.07.2025 ರಂದು ಒಂದು ವಿಶೇಷ ತನಿಖಾ ತಂಡವನ್ನು (ಎಸ್.ಐ.ಟಿ) ರಚಿಸಿ ಆದೇಶಿಸಲಾಗಿರುತ್ತದೆ.<br><br>ಈ ಕುರಿತು ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ದಾಖಲಾದ ಅಪರಾಧ ಮೊಕದ್ದಮೆ ಸಂಖ್ಯೆ: 39/2025, ಕಲಂ: 211(ಎ), 230, 231, 229, 227, 228, 240, 236, 233, 248, 336(4), 61(2) ಜೊತೆ 3(8) BNS ಪ್ರಕರಣವನ್ನು ಎಸ್.ಐ.ಟಿ ತನಿಖಾತಂಡವು ತನಿಖೆ ಕೈಗೊಂಡಿದ್ದು, ಪ್ರಸ್ತುತ ತನಿಖೆಯು ಪ್ರಗತಿಯಲ್ಲಿರುತ್ತದೆ. |
| ಆ) | ಇದರ ಹಿಂದೆ ಇರುವ ವ್ಯಕ್ತಿಗಳ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ಈ ಪ್ರಕರಣದಲ್ಲಿ ಆರೋಪಿತರುಗಳಾದ A1 ಚಿನ್ನ ಸಿ.ಎನ್ @ ಚಿನ್ನಾ @ ಚಿನ್ನಯ್ಯ A2 ಮಹೇಶ ಶೆಟ್ಟಿ ತಿಮರೋಡಿ, A3 ಗಿರೀಶ ಮಟ್ಟಣವರ್, A4 ವಿಠ್ಠಲ ಗೌಡ, A5 ಟಿ.ಜಯಂತ್ A6 ಸುಜಾತ ಆರ್ @ ಸುಜಾತ @ ಸುಜಾತ ಭಟ್ ರವರುಗಳ ವಿರುದ್ಧ ದಿನಾಂಕ: 20.11.2025 ರಂದು ಕಲಂ 215 BNSS ಪ್ರಕಾರ ದೋಷಾರೋಪಣೆಗಳು ಕಂಡು ಬಂದಿದ್ದರಿಂದ ವರದಿಯನ್ನು ತಯಾರಿಸಿ ಕಲಂ: 215 BNSS ಪ್ರಕಾರ ಕ್ರಮ ಕೈಗೊಳ್ಳುವಂತೆ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. |
| ಇ) | ತನಿಖೆ ಪೂರ್ಣಗೊಂಡಿದೆಯೇ; ತನಿಖಾ ವರದಿ ಸಲ್ಲಿಸಲಾಗಿದೆಯೇ? (ವರದಿಯ ಪ್ರತಿ ನೀಡುವುದು) | ಪ್ರಸ್ತುತ ಪ್ರಕರಣದ ತನಿಖೆಯು ಪ್ರಗತಿಯಲ್ಲಿರುತ್ತದೆ. |

ಸಂಖ್ಯೆ: ಹೆಚ್‌ಡಿ 53 ಎಸ್‌ಡಿಎನ್ 2025

**(ಡಾ: ಜಿ.ಪರಮೇಶ್ವರ)**
ಗೃಹ ಸಚಿವರ